ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 126-133
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಧುನಿಕ ಕನ್ನಡ ನಾಟಕಗಳಲ್ಲಿ ಮೈಸೂರು ಸಂಸ್ಥಾನ: ಧಾರ್ಮಿಕ ನೆಲೆಗಳು

**ಕವಿತ ಎಸ್.ಬಿ**
ಸಂಶೋಧನಾ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಪ್ರಭುತ್ವವು ಎಲ್ಲ ಕಾಲದಲ್ಲಿಯೂ ತನ್ನ ಅಧೀನಕ್ಕೆ ಒಳಪಟ್ಟವರ ಮೇಲೆ ವಿವಿಧ ರೀತಿಯಲ್ಲಿ ಅಧಿಕಾರವನ್ನು ಚಲಾಯಿಸುವ ಒಂದು ವ್ಯವಸ್ಥಿತ ಶಕ್ತಿಯಾಗಿದೆ. ಇಂತಹ ಪ್ರಭುತ್ವವು ಸಮಾಜದ ಬೇರೆ ಬೇರೆ ಪಂಗಡ, ಜಾತಿ ವರ್ಗಗಳನ್ನು ಕೇಂದ್ರೀಕರಿಸಿ ನಿಯಂತ್ರಿಸಲು ಬಳಸಿಕೊಂಡ ಪ್ರಮುಖ ಅಸ್ತ್ರವೇ 'ಧರ್ಮ'. ಧರ್ಮ ಎಂದ ಕೂಡಲೇ ಅದರ ಪರಿಕಲ್ಪನೆಗಳು ಮನದಲ್ಲಿ ಮೂಡುವುದಾದರೂ, ಅದನ್ನು ಖಚಿತವಾದ ಶಬ್ದಗಳಲ್ಲಿ ನಿಖರವಾಗಿ ಹಿಡಿದಿಡುವುದು ಇನ್ನು ಸಾಧ್ಯವಾಗಿಲ್ಲ. ಧರ್ಮ-ದೇವರುಗಳ ಬಗ್ಗೆ ಪ್ರಥಮ ಕಲ್ಪನೆ ಮೂಡಿಸಿಕೊಂಡ ಆದಿಮಾನವನಲ್ಲಿದ್ದ ನಂಬಿಕೆ ಮತ್ತು ಗೊಂದಲಗಳನ್ನೇ ಇಂದಿನ ಸಂಕೀರ್ಣವಾದ ಸಮಾಜದಲ್ಲೂ ಕಾಣಬಹುದಾಗಿದೆ. ಸರ್ವಚೇತನವಾದ, ಪ್ರಕೃತಿವಾದ, ಶಕ್ತಿವಾದ, ಬಹುದೇವತಾವಾದ ಮತ್ತು ಏಕದೇವತಾವಾದಗಳಿಂದಹ ಪರಿಕಲ್ಪನೆಗಳು ದೇವರನ್ನು ಪರಿಭಾವಿಸುವ ಮತ್ತು ಅರ್ಥೈಸುವ ರೀತಿಯಲ್ಲಿ ಮಾತ್ರ ಭಿನ್ನವಾಗುವ ಈ ಧರ್ಮಗಳು ಮಾನವನ ನೈತಿಕ ಜೀವನಕ್ಕೆ ಒತ್ತು ಕೊಟ್ಟು, ಅವನ ಅಂತರಂಗದ ಅನಿಸಿಕೆ ನಂಬಿಕೆಗಳನ್ನು ಸಂಯೋಜಿಸಿ, ಸಾಮಾಜಿಕ ಬದುಕಿಗೆ ವಿಶಿಷ್ಟತೆ ಒದಗಿಸುತ್ತವೆ. ಇಂತಹ ಹಲವು ಕಾರಣಗಳಿಂದ ಮಾನವ ಹುಟ್ಟಿನಿಂದ ಬಂದ ಅಥವಾ ತನಗೆ ಸರಿ ಎನ್ನಿಸಿದ ಧರ್ಮವನ್ನು ಒಪ್ಪಿಕೊಂಡು ಅನುಸರಿಸ ಬಯಸುತ್ತಾನೆ. ಪ್ರಸ್ತುತ ಲೇಖನವು ಆಧುನಿಕ ಕನ್ನಡ ನಾಟಕಗಳಲ್ಲಿ ಕಂಡುಬರುವ ಮೈಸೂರು ಸಂಸ್ಥಾನ ಮತ್ತು ಧಾರ್ಮಿಕ ನೆಲೆಗಳನ್ನು ಕುರಿತು ಚರ್ಚಿಸುತ್ತದೆ.*

**Keywords:** *ಕನ್ನಡ ಸಾಹಿತ್ಯ, ಆಧುನಿಕ ಕನ್ನಡ, ಕನ್ನಡ ನಾಟಕ, ಮೈಸೂರು ಸಂಸ್ಥಾನ, ಧಾರ್ಮಿಕ ನೆಲೆ.*

## ಪೀಠಿಕೆ

ಆಧುನಿಕ ಕನ್ನಡ ನಾಟಕಗಳಲ್ಲಿ ಧರ್ಮದ ವಿಚಾರವಾಗಿ ನಮ್ಮ ಗಮನ ಸೆಳೆಯುವ ನಾಟಕಗಳ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಅವುಗಳಲ್ಲಿ ಮೈಸೂರು ಸಂಸ್ಥಾನದ ಧಾರ್ಮಿಕ ಪರಂಪರೆಗೆ ಸಂಬಂಧಿಸಿದಂತೆ ಹೆಸರಿಸಬಹುದಾದ ನಾಟಕಗಳೆಂದರೆ ಎಂ.ಆರ್. ಶ್ರೀನಿವಾಸಮೂರ್ತಿ ಅವರ 'ಧರ್ಮ ದುರಂತ', ಅಡ್ಡಂಡ ಸಿ. ಕಾರ್ಯಪ್ಪ ಅವರ 'ಟಿಪ್ಪು ನಿಜಕನಸುಗಳು', ಮಾಸ್ತಿ ಅವರ 'ಕಾಕನಕೋಟೆ', ಡಿ.ಎ.ಶಂಕರ್ ಅವರ 'ಟಿಪ್ಪುಸುಲ್ತಾನ್' ಮೊದಲಾದವು.

ಇತಿಹಾಸದ ಸುಳ್ಳು ಚಿತ್ರಣದ ಮೇಲೆ ರಾಷ್ಟ್ರೀಯತೆಯನ್ನು ಗಟ್ಟಿಗೊಳಿಸಲಾಗುವುದಿಲ್ಲ ಎಂಬ ಡಾ.ಎಸ್.ಎಲ್.ಭೈರಪ್ಪ ಅವರ ಮಾತು ಸತ್ಯ ಎನಿಸುತ್ತದೆ. ಟಿಪ್ಪು ಸುಲ್ತಾನನ ವಿಷಯದಲ್ಲಂತೂ ಅಪ್ಪಟ ಸತ್ಯವಾಗಿದೆ. ಟಿಪ್ಪು ಮರಣ ಹೊಂದಿ 225 ವರ್ಷಗಳಾದರೂ, ಅವನ ಬಗೆಗಿರುವ ಕೆಲವು

***Please cite this article as:*** ಕವಿತ ಎಸ್. ಬಿ. (2025). ಆಧುನಿಕ ಕನ್ನಡ ನಾಟಕಗಳಲ್ಲಿ ಮೈಸೂರು ಸಂಸ್ಥಾನ: ಧಾರ್ಮಿಕ ನೆಲೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(6), 126–133

ಸತ್ಯಗಳನ್ನು ಸುಳ್ಳೆಂದು ಹೇಳಲು ಹೊರಟಿರುವುದನ್ನು ಅಡ್ಡಂಡ ಸಿ. ಕಾರ್ಯಪ್ಪ ಅವರ 'ಟಿಪ್ಪು ನಿಜಕನಸುಗಳು' ಎಂಬ ನಾಟಕದಲ್ಲಿ ಗಮನಿಸಬಹುದಾಗಿದೆ.

1947ಕ್ಕೆ ಮೊದಲು ಭಾರತಕ್ಕೆ ದಾಳಿಯಿಟ್ಟವರು ಕೇವಲ ಬ್ರಿಟಿಷರು ಮಾತ್ರವಲ್ಲ. ಅದಕ್ಕಿಂತ ಮೊದಲು ಮುಸ್ಲಿಂ ಸುಲ್ತಾನರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು. ಕೆಲವರು ಸಂಪತ್ತಿನ ಲೂಟಿಗೆ, ಬಲಾತ್ಕಾರದ ಧರ್ಮ ವಿಸ್ತರಣೆಗೆ, ವ್ಯಾಪಾರಕ್ಕೆ, ಸಾಮ್ರಾಜ್ಯ ವಿಸ್ತರಣೆಗೆ ಬಂದರು. ಈ ವಸಾಹತುಶಾಹಿಗಳು ತಮ್ಮ ಅಧಿಕಾರವನ್ನು ಸ್ಥಾಪಿಸಲು ಧಾರ್ಮಿಕತೆಯ ಮೊರೆ ಹೋದರು. ಅವರಲ್ಲಿ ಟಿಪ್ಪು ಮುಖ್ಯನೆನಿಸುತ್ತಾನೆ. ಆಡಳಿತದ ಜೊತೆಗೆ ಇಸ್ಲಾಂ ಧರ್ಮದ ಬೆಳವಣಿಗೆಗೆ ಮತಾಂತರ ಮಾಡಿದನೆಂಬ ಆಪಾದನೆಯಿದೆ.

ಅಡ್ಡಂಡ ಸಿ. ಕಾರ್ಯಪ್ಪ ಅವರು 'ಟಿಪ್ಪು ನಿಜಕನಸುಗಳು' ಎಂಬ ನಾಟಕದಲ್ಲಿ ಟಿಪ್ಪುವನ್ನು ಮತಾಂಧನಂತೆ ಸೃಷ್ಟಿಸಲಾಗಿದೆ. ಈ ನಾಟಕವು 15 ದೃಶ್ಯಗಳನ್ನು ಒಳಗೊಂಡಿದೆ. ಈ ನಾಟಕದಲ್ಲಿ ಟಿಪ್ಪುವನ್ನು ದೇಶದ್ರೋಹಿಯಂತೆ, ಮತಾಂಧ, ಮಹಾಕ್ರೂರಿ ಎಂಬಂತೆ ಚಿತ್ರಿಸಲಾಗಿದೆ. ನಾಟಕದ ದೃಶ್ಯವನ್ನು ನೋಡಿದಾಗ ಒಂದು ಕ್ಷಣ ಟಿಪ್ಪುವಿನ ಬಗ್ಗೆ ತಪ್ಪು ಕಲ್ಪನೆ ಮೂಡುವುದು ಸಹಜ. ಆದರೆ ಈ ನಾಟಕದಲ್ಲಿರುವ ಬಹುತೇಕ ದೃಶ್ಯಗಳಿಗೆ ಯಾವುದೇ ಐತಿಹಾಸಿಕ ದಾಖಲೆಗಳಿಲ್ಲ. ಇದನ್ನು ಕೇವಲ ನಾಟಕವನ್ನಾಗಷ್ಟೆ ನೋಡಿದರೆ ಒಳಿತು. ಬದಲಿಗೆ ಧಾರ್ಮಿಕ ಹಿನ್ನೆಲೆಯಲ್ಲಿ ಚರ್ಚಿಸಿದರೆ ಕೋಮು ಸೌಹಾರ್ಧತೆ ಕದಲುವ ಸಾಧ್ಯತೆ ಹೆಚ್ಚಿದೆ.

ಮಾನವನ ಬದುಕಿಗೆ ಪೂರಕವಾದ ಮತ್ತು ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಕರಿಸುವ ಆಚರಣೆಗಳನ್ನು ಪಾಲಿಸುವುದನ್ನು ಸ್ವಾಭಾವಿಕ ಧರ್ಮ ಎನ್ನುತ್ತೇವೆ. ಪವಿತ್ರವೆನಿಸತಕ್ಕುದು ಅತಿಮಾನುಷವೇ ಇರಬೇಕೆಂಬ ನಿಯಮವಿಲ್ಲ, ಮಾನವಾಕೃತಿಯಲ್ಲಿಯೇ ಇರಬೇಕೆಂದೂ ಇಲ್ಲ, ವೈಯಕ್ತಿಕ ಭಾವನೆ ಮಾತ್ರವೆಂದೂ ಅದರರ್ಥವಲ್ಲ. ಧರ್ಮ ಎಂಬ ಶಬ್ದವನ್ನು ವೈಯಕ್ತಿಕ ಇಲ್ಲವೆ ಅತಿಮಾನುಷವೆಂಬ ಅಭಿಪ್ರಾಯದಲ್ಲಿ ಬಳಸುವುದಾದರೆ ಆಗುವ ಅನಾಹುತಗಳನ್ನು ನಾಟಕ ಅರ್ಥಪೂರ್ಣವಾಗಿ ಚಿತ್ರಿಸಿಕೊಡುತ್ತದೆ.

ಮಾಸ್ತಿಯವರ 'ಕಾಕನಕೋಟೆ' ನಾಟಕದಲ್ಲಿ ಹೆಗ್ಗಡೆಯವರ ಮಗ ಚಿಕ್ಕಯ್ಯನಿಗೆ ಕಾಡುಕುರುಬರ ನಾಯಕ ಕಾಚನ ಮಗಳಾದ ಮೊಲ್ಲೆಯ ಮೇಲೆ ಮನಸ್ಸಾಗುತ್ತದೆ. ಜಾತಿ, ಧರ್ಮ ಬೇರೆಯಾದರೂ, ಇಬ್ಬರ ಮನೆಗಳಲ್ಲಿ ಮದುವೆಗೆ ಒಪ್ಪುವುದಿಲ್ಲ ಎಂದು ಗೊತ್ತಿದ್ದರೂ ಇಬ್ಬರೂ ಮದುವೆಯಾಗುವ ಮನಸ್ಸು ಮಾಡುತ್ತಾರೆ. ಕಾಚ ಈ ವಿಷಯ ತಿಳಿದು ಕೋಪಿಸಿಕೊಂಡಾಗ, ರಾಜ ರಣಧೀರ ಕಂಠೀರವ ಕಾಚನನ್ನು ತಡೆದು ಇಬ್ಬರ ಪ್ರೀತಿಗೆ ಸಂತೋಷ ವ್ಯಕ್ತಪಡಿಸುತ್ತ, ಮದುವೆಗೆ ಹೆಗ್ಗಡೆಗಳ ಒಪ್ಪಿಗೆಯನ್ನು ಕೇಳುತ್ತಾರೆ.

ಕರಣಿಕರು ಮಧ್ಯೆ ಪ್ರವೇಶಿಸಿ ಇಬ್ಬರನ್ನು ಗಂಟು ಹಾಕಲು ಪ್ರಯತ್ನಿಸುತ್ತಾರೆ. 'ಇಂಥ ಸಂಬಂಧ ಆದದ್ದು ಹಿಂದೆ ಉಂಟು ಮಹಾಸ್ವಾಮಿ. ಇಬ್ಬರೂ ಒಂದೇ ಕುಲ. ಇವರು ಊರುಗಳಲ್ಲಿದ್ದೂ, ಇವರು ಕಾಡುಗಳಲ್ಲಿದ್ದೂ, ಬೇರೆ ಬೇರೆ ಅನ್ಯೋಹಾಗೆ ನಡೆದುಕೊಳ್ಳುತ್ತಾರೆ. ಮಹಾಸ್ವಾಮಿ ಆಗಬೇಕು ಅಂದರೆ ಸಂಬಂಧ ಆಗಬಹುದು' ಎಂದು ಎಲ್ಲರಲ್ಲೂ ನಾವೆಲ್ಲ ಒಂದೇ ಎಂಬ ಮನೋಭಾವನೆ ಮೂಡಿಸಲು ಯತ್ನಿಸುತ್ತಾನೆ. ಸ್ವತಃ ಮೈಸೂರು ಒಡೆಯ ರಣಧೀರ ಕಂಠೀರವ ನರಸರಾಜ ಒಡೆಯರೇ ಮುಂದೆ ನಿಂತು ಇಬ್ಬರ ಮದುವೆ ಮಾಡಿಸುತ್ತಾರೆ. ಜೊತೆಗೆ 'ಈ ಸೀಮೆಯನ್ನ ನಿನ್ನ ಮಗಳಿಗೆ ಉಂಬಳಿ ಹಾಕಿಕೊಡುತ್ತೇವೆ. ಇಲ್ಲಿಗೆ ಅವಳ ಗಂಡ ಹೆಗ್ಗಡೆಯಾಗಿರಲಿ, ಅವಳು ಹೆಗ್ಗಡಿತಿ' ಎಂದು ಘೋಷಿಸುವುದರ ಮೂಲಕ ಮದುವೆಗೆ ಉಡುಗೊರೆಯನ್ನು ಈ ರೀತಿ ನೀಡುತ್ತಾರೆ. ಈ ನಾಟಕದಿಂದ ಮೈಸೂರು ಒಡೆಯರು ಧರ್ಮ ಸಮನ್ವಯತೆಗೆ ತಮ್ಮದೇ ಆದ ಅಮೂಲ್ಯ

ಕೊಡುಗೆಯನ್ನು ನೀಡಿದ್ದಾರೆ ಎಂಬುದನ್ನು ಅರಿಯಬಹುದಾಗಿದೆ.

ಮೈಸೂರು ಒಡೆಯರ ಧಾರ್ಮಿಕ ಪರಂಪರೆಯ ವಿಚಾರದಲ್ಲಿ ಗಮನ ಸೆಳೆಯುವ ಮತ್ತೊಂದು ನಾಟಕ ಎಂ.ಆರ್. ಶ್ರೀನಿವಾಸಮೂರ್ತಿ ಅವರ 'ಧರ್ಮ ದುರಂತ'. ಎರಡನೆಯ ಮೈಸೂರು ಯುದ್ಧದ ಕಾಲದಲ್ಲಿ ಟಿಪ್ಪು ಸುಲ್ತಾನನು ರಾಜ್ಯಭಾರವನ್ನು ವಹಿಸಿಕೊಂಡ ಮೇಲೆ ಬಿದನೂರು ಕೋಟೆಯನ್ನು ಮುತ್ತಿಗೆ ಹಾಕಿ ಕೈವಶ ಮಾಡಿಕೊಂಡನು. ಆಗ ಸುಮಾರು ಹದಿನೇಳು ವರ್ಷ ವಯಸ್ಸಿನ ರಾಮರಾಯನೆಂಬ ಬ್ರಾಹ್ಮಣನೊಬ್ಬನು ಟಿಪ್ಪುವಿಗೆ ಸೆರೆಯಾಗುತ್ತಾನೆ. ಬಲಾತ್ಕಾರದಿಂದ ಜಾತಿ ಕೆಟ್ಟು ಆ ಯುವಕನು ಖಾನ್ ಜಹಾನ್ ಖಾನ್ ಎಂದು ಪ್ರಸಿದ್ಧನಾಗಿ ಇಸ್ಲಾಂ ತತ್ವಶಾಸ್ತ್ರದಲ್ಲಿ ಪಾರಂಗತನಾಗಿ ಜೊತೆಗೆ ದೊಡ್ಡ ಸರದಾರನಾಗಿ ಟಿಪ್ಪುವಿಗೆ ಆಪ್ತನಾಗುತ್ತಾನೆ.

ನಾಲ್ಕನೆಯ ಮೈಸೂರು ಯುದ್ಧ ನಡೆದು ಬ್ರಿಟಿಷರು ಶ್ರೀರಂಗಪಟ್ಟಣದ ಕೋಟೆಯನ್ನು ವಶಪಡಿಸಿಕೊಂಡಾಗ ಖಾನನು ಬಹಳಷ್ಟು ಗಾಯಕ್ಕೊಳಗಾಗಿ ಕೆಳಗೆ ಬೀಳುತ್ತಾನೆ. ದೈವಕೃಪೆಯಿಂದ ಪ್ರಾಣಕ್ಕೇನೂ ಅಪಾಯವಾಗುವುದಿಲ್ಲ. ಸಂಗ್ರಾಮ ಭೂಮಿಯಲ್ಲಿ ಹೆಣದ ರಾಶಿಯ ಕೆಳಗೆ ಆಗಲೋ ಈಗಲೋ ಹೋಗುವ ಜೀವವನ್ನು ಇರಿಸಿಕೊಂಡಿದ್ದ ಖಾನ್‌ನನ್ನು ಅಯಷೆಯ ತಂದೆ ಮೌಲಾನಾ ಕಾಪಾಡುತ್ತಾನೆ. ಸುಂದರಿಯಾದ ಮುಸಲ್ಮಾನ ತರುಣಿ ಅಯಷೆಯ ಅನುಕಂಪ, ಕಾಳಜಿ ತುಂಬಿದ ಪ್ರೀತಿಯಲ್ಲಿ ಬೀಳುತ್ತಾನೆ. ತನ್ನ ಪೂರ್ವ ಜಾತಿಯಲ್ಲಿ ಮದುವೆಯಾಗಿದ್ದ ಲಲಿತೆಯನ್ನು ಮರೆತಿರುತ್ತಾನೆ.

ಜಹಾನ್ ಖಾನ್ ನನ್ನು ಆರೈಕೆ ಮಾಡುತ್ತಿದ್ದ ಮೌಲಾನಾನಿಗೆ ಟಿಪ್ಪುವಿನ ಮರಣ ನೋವನ್ನುಂಟುಮಾಡುತ್ತದೆ. ಅಲ್ಲಾಹುವಿನ ಮುಂದೆ ಪ್ರಾರ್ಥನೆ ಸಲ್ಲಿಸುತ್ತಾನೆ. 'ಅವರ ಮತದೊಳ್ ನಡೆದು ಧರ್ಮರಾಜ್ಯವ ಕಟ್ಟಿ ಧರ್ಮದಿಂ ಪಾಲಿಸಿದ ಧರ್ಮವೀರನನಿಂದು ಪಾಪಿಗಳು, ಸೈತಾನಬಂಟರಿಂ ಕೊಲಿಸಿದಯ್. ಧರ್ಮರಕ್ಷಕ ನೀನು, ನಿನ್ನ ಕೈಯಾಟವೋ, ಪಾಪಿ ಸೈತಾನಿನಾ ಹೂಟವೋ ನಾನರಿಯೆ' ಎಂದು ಅಲ್ಲಾಹುನನ್ನು ಕೇಳುತ್ತಾನೆ.

ಮೌಲಾನಾನ ಮಾತುಗಳಲ್ಲಿ ಧರ್ಮ, ದೇವರ ವಿರುದ್ಧ ಹೋಗುವವರಿಗೆ ಶಿಕ್ಷೆ ಕಾದಿರುತ್ತದೆ ಎಂಬುದು ವಿಧಿತವಾಗುತ್ತದೆ. ಮಗಳು ಅಯಷೆ ಮುಗ್ಧಳಾಗಿ ಧರ್ಮದ ಬಗ್ಗೆ ಕೇಳುತ್ತಿದ್ದ ಪ್ರಶ್ನೆಗಳಿಗೆ ಬುದ್ಧಿವಂತಿಕೆಯಿಂದ ಉತ್ತರಿಸುತ್ತಾನೆ. 'ನಾವು ಮಾಡಿದ ಕರ್ಮ ಬೇತಾಳ ಬೆನ್ನ ಬಿಡುವುದೆ ನಮಗೆ? ಸುಲ್ತಾನರಾವಾಗಲೂ ದುಡುಕು. ತಂತಮ್ಮ ಧರ್ಮದಲ್ಲಿ ಅವರವರಿಗಭಿಮಾನ ನೆಲೆಸಿಹುದು. ಹಲವು ಮುಖದಲಿ ದೇವ ಅವರವರ ಭಾವಕ್ಕೆ ತಕ್ಕಂತೆ ರೂಪಾಗಿ ತೋರುವವನು. ಕೈಕೊಂಬ ಪೂಜೆಯನ್ನು, ದೈವಶಾಸನ ಮೀರಿ ಧರ್ಮಂಧರಾಗಿ ಜನ ನಡೆಯುತಿರೆ ದೇವನೇಂ ಸೈರಿಪನೆ? ತಕ್ಕಂತೆ ದಂಡಿಸದೆ ಬಿಡುವನೇ? ವಿಶ್ವಾಧಿಪನ ಮುಂದೆ ಸುಲ್ತಾನ ಗಿಲ್ತಾನ ಹುಲುಕಡ್ಡಿಗಳ ಹೆಮ್ಮೆ ಒಣಹೆಮ್ಮೆ ನಡೆಯುವುದೇ?' ಧರ್ಮಾಭಿಮಾನವೆನ್ನುವ ಭೂತ ಎಲ್ಲರನ್ನು ಹಿಡಿದಾಡಿಸುತ್ತದೆ ಎಂದು ಜನರ ಧರ್ಮಾಂಧತೆಯ ಬಗ್ಗೆ ಜನರಿಗಿರುವ ತಿಳುವಳಿಕೆಯನ್ನು ಮಗಳಿಗೆ ತಿಳಿಸುತ್ತಾನೆ.

ಹೀಗಿರುವಲ್ಲಿ ಅವನ ಪೂರ್ವ ಜಾತಿಯ ಬ್ರಾಹ್ಮಣ ಹೆಂಡತಿ, ಕೃಷ್ಣರಾಯರ ಮಗಳಾದ ಲಲಿತೆ ಪ್ರಾಪ್ತವಯಸ್ಕಳಾಗಿ ಪತಿಯನ್ನು ಹುಡುಕಿ ಅವನೊಂದಿಗೆ ಮತ್ತೆ ಸಂಸಾರ ಹೂಡಬೇಕೆಂಬ ಕನಸು ಕಾಣುತ್ತಾ ಪತಿಯ ಹುಡುಕಾಟದಲ್ಲಿ ತೊಡಗುತ್ತಾಳೆ. ಶ್ರೀಹರಿಯ ದಯೆಯಿಂದ ಹಿಂದೂ ಮತ್ತು ಮುಸಲ್ಮಾನ್ ಪಂಗಡಗಳಿಗೂ ಮೈತ್ರಿ ಏರ್ಪಡಿಸಿ, ದೇಶಾಭುದ್ಯಾಯದ ಕಾರ್ಯಗಳು ನಡೆಯಬೇಕೆಂಬ ಆಲೋಚನೆಯನ್ನು ಹೊಂದಿದ್ದ ಪೂರ್ಣಯ್ಯನವರ ಮನೆಗೆ ಬಂದು ಪತಿಭಿಕ್ಷೆ ಬೇಡುತ್ತಾಳೆ. ತಮ್ಮ ಮಗಳೆಂದು ಕನಿಕರಿಸಿ ಮಾಂಗಲ್ಯ ಸೌಭಾಗ್ಯ ಕೊಡಿಸಿಕೊಡುವಂತೆ ಬೇಡುತ್ತಾಳೆ.

ಮೌಲಾನನ ಮನೆಯ ಹತ್ತಿರದ ಬೀದಿಯಲ್ಲಿ ತರ್ಕಪಂಡಿತನೊಬ್ಬ ಬ್ರಾಹ್ಮಣರಾಗಬೇಕೆಂದುಕೊಂಡು ಬಂದ ಊರಿನ ಜನರಿಗೆ ಪಂಚಗವ್ಯ, ಜನಿವಾರ, ನಾಮ, ವಿಭೂತಿಯನ್ನು ಕೊಟ್ಟು ಬ್ರಾಹ್ಮಣ ಜಾತಿಗೆ ಸೇರಿಸುತ್ತಿರುತ್ತಾನೆ. ಮತಾಂತರಗೊಂಡ ಜನರಿಗೆ ಯಾರಾದರೂ ಗೋತ್ರ ಕೇಳಿದರೆ ನಾಡೆಲ್ಲ ತುಂಬಿಕೊಂಡಿರುವ ಕಾಶ್ಯಪ ಗೋತ್ರ ಇಲ್ಲವೇ ಭಾರದ್ವಾಜ ಗೋತ್ರ ಹೇಳಲು ತಿಳಿಸುತ್ತಾನೆ. ತರ್ಕಪಂಡಿತನ ಪಾತ್ರ ನಾಟಕದಲ್ಲಿ ಚುರುಕಾಗಿ ಸಾಗುತ್ತದೆ. ಬ್ರಾಹ್ಮಣ ಧರ್ಮಕ್ಕೆ ಸೇರಬೇಕೆಂದುಕೊಂಡ ಜನರನ್ನು ಸುಲಭವಾಗಿ ಆ ಧರ್ಮಕ್ಕೆ ಸೇರಿಸುವ ಪ್ರಯತ್ನ ಮಾಡುತ್ತಾ ಎಲ್ಲರ ಗಮನ ಸೆಳೆಯುತ್ತಾನೆ.

ಖಾನ್ ಜಹಾನ್ ಮತಾಂತರಗೊಂಡಿದ್ದಕ್ಕೆ ಪಶ್ಚಾತ್ತಾಪ ಪಡುತ್ತಿರುವಾಗ ಅಯಷೆ ಹೇಳುವ ಮಾತುಗಳು ಧರ್ಮ ಸಮನ್ವಯಕ್ಕೆ ಸೂಕ್ತ ಉದಾಹರಣೆ ಎನಿಸುತ್ತದೆ. 'ರಾಜ್ಯಕ್ಕೆ ಮತವಿಲ್ಲ; ಹಿಂದುವೆಂದೇನಲ್ಲ ಇಸ್ಲಾಮವೆಂದಲ್ಲ. ಮತ ಧರ್ಮವೆನ್ನುವುದು ಪಾರಮಾರ್ಥದ ವಿಷಯ. ಅವರವರ ಭಕ್ತಿ ನಿಷ್ಠೆಗಳಂತೆ ನಡೆಯುವರು. ಪರಮಾರ್ಥ ಸಾಧನೆಗೆ ದೈವದೃಷ್ಟಿಯಲೆಲ್ಲ ಸರ್ವಸಮರೆಂಬಂತೆ, ಲೌಕಿಕ ವ್ಯವಹಾರ ಸಾಧನೆಗೆ ರಾಜದೃಷ್ಟಿಯಲೆಲ್ಲ ಸರ್ವಸಮರಾಗಿಹೆವು. ಈ ನಾಡು ನಮ್ಮದೆಂದೇ ತಿಳಿದು ಒಟ್ಟಾಗಿ ಒಂದೇ ಮನೆಯವರಂತೆ ಬಾಳೋಣ, ಪರಿತಾಪಪಡಲೇಕೆ?' ಎಂದು ಸಮಾಧಾನ ಮಾಡುತ್ತಾಳೆ.

ತನ್ನ ಗಂಡನನ್ನು ಹುಡುಕಹೊರಟ ಲಲಿತೆ ಆಕಸ್ಮಿಕವಾಗಿ ಅಯಷೆಯನ್ನು ಭೇಟಿಯಾಗುತ್ತಾಳೆ. ಮಳೆಯ ಕಾರಣದಿಂದಾಗಿ ಆಶ್ರಯ ಹುಡುಕ ಹೋರಾಟ ಲಲಿತೆ ಮುಸಲ್ಮಾನ ಅಯಷೆಯ ಮನೆಯ ಒಳಗೆ ಹೋಗಲು ಮನಸ್ಸು ಹಿಂಜರಿದರೂ ಅಯಷೆಯ ಅತಿಥಿ ಸತ್ಕಾರ ಅವಳನ್ನು ಅಯಷೆಯ ಮನೆಯೊಳಗೆ ಹೋಗಲು ಪ್ರೇರೇಪಿಸುತ್ತದೆ. ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಂಡು ಕಷ್ಟ ದುಃಖಗಳನ್ನು ಹಂಚಿಕೊಳ್ಳುವಾಗ ಇಬ್ಬರಲ್ಲೂ ತಾವಿಬ್ಬರು ಅಕ್ಕ–ತಂಗಿಯರೆಂಬ ಭಾವನೆ ಮೂಡುತ್ತದೆ. ಕೋಣೆಯಲ್ಲಿದ್ದ ಖಾನ್ ಜಹಾನ್ ಇಬ್ಬರ ಮಾತು ಕೇಳಿಸಿಕೊಂಡು ತನ್ನ ಲಲಿತೆಯ ಧ್ವನಿಯೇ ಇದ್ದ ಹಾಗೆ ಇದೆ ಎನಿಸಿ ಪೂರ್ವ ಸ್ಮರಣೆಗೆ ಒಳಗಾಗುತ್ತಾನೆ. ಲಲಿತೆಯನ್ನು ಗುರುತಿಸಿ ಐದು ವರ್ಷಗಳ ನಂತರ ನೋಡಿದ ಹೆಂಡತಿಯನ್ನು ಮುದ್ದಾಡಲು ಮತಾಂತರ ಅಡ್ಡವಾಗುತ್ತದೆ.

ಗಂಡನನ್ನು ನೋಡಿದ ಲಲಿತೆ ಅಪಾರ ಸಂತೋಷಕ್ಕೊಳಗಾದರೂ, ಮತಾಂತರಗೊಂಡ ಗಂಡನನ್ನು ಒಪ್ಪಿಕೊಳ್ಳಲು ಮನಸ್ಸು ಹಿಂಜರಿಯುತ್ತದೆ. ಅದು ಅಲ್ಲದೆ ಅಯಷೆಯ ಪ್ರೀತಿಯ ಖಾನ್ ಜಹಾನ್ ಅವನು. ತಂಗಿ ಎಂದು ಅವಳನ್ನು ಒಪ್ಪಿಕೊಂಡು ಅವಳ ಬದುಕಿನಿಂದ ಖಾನ್ ಜಹಾನ್ ನನ್ನ ದೂರ ಮಾಡಲು ಅವಳ ಮನಸ್ಸು ಒಪ್ಪುವುದಿಲ್ಲ. ಮೂವರು ಗೊಂದಲದಲ್ಲಿದ್ದಾಗ ಮೌಲಾನ ಅವರ ಗೊಂದಲವನ್ನು ನಿವಾರಿಸುವ ಪ್ರಯತ್ನ ಮಾಡುತ್ತಾನೆ. 'ಅಯಷೆಯಂತೋ ಅಂತು ನೀನೆನಗೆ. ಇಬ್ಬರೂ ಮಕ್ಕಳೇ ಆಗಿಹಿರಿ. ಮತದಲ್ಲಿ ಏನಿಹುದು? ಧರ್ಮದಲ್ಲಿ ಸೌಹಾರ್ದದಲಿ ನಾವು ನಡೆದುಕೊಂಡರೆ ದೇವ ಮೆಚ್ಚುವನು. ಎಂದಿಗೂ ಬರಿಯ ಮತ ನೋಡಿ ಮೆಚ್ಚುವುದಿಲ್ಲ. ದೇವನೆಲ್ಲರ ತಂದೆ, ಎಲ್ಲರ ಮತಗಳು ಒಂದೇ' ಎಂದು ದೇವರೊಬ್ಬ ನಾಮ ಹಲವು ಎಂಬ ತತ್ವವನ್ನು ನೆನಪಿಗೆ ತರುತ್ತಾನೆ. ಇನ್ನು ಮುಂದೆ ಎಲ್ಲರು ನೆಮ್ಮದಿಯಿಂದ, ಸಂತೋಷದಿಂದ ಬದುಕು ಸಾಗಿಸೋಣ ಎನ್ನುತ್ತಾನೆ.

ಬ್ರಿಟಿಷರು ಮೈಸೂರು ರಾಜ್ಯವನ್ನು ಮುಮ್ಮಡಿ ಕೃಷ್ಣರಾಜರಿಗೆ ವಹಿಸಿ ಕೊಟ್ಟ ಮೇಲೆ ಹಿಂದೂಗಳ ದೇವಾಲಯಗಳಲ್ಲಿ ದೇವತಾ ವಿಗ್ರಹಗಳ ಪ್ರತಿಷ್ಠಾಪನೆ, ಉತ್ಸವಾದಿಗಳು ವಿಜೃಂಭಣೆಯಿಂದ ನಡೆಯತೊಡಗುತ್ತದೆ. ಖಾನನಿಗೆ ತನ್ನ ಪೂರ್ವಜಾತಿಯ ಸ್ಮರಣೆಯುಂಟಾಗಿ ಮನಸ್ಸು ಹಿಂದು ಮತದ ಮತ್ತು ಬ್ರಾಹ್ಮಣ್ಯದ ಕಡೆಗೆ ಹೋಗುತ್ತದೆ. ಖಾನನು ಪೂರ್ಣಯ್ಯನವರನ್ನು ಭೇಟಿಯಾಗಿ, 'ಮತ್ತೆ ಬ್ರಾಹ್ಮಣನಾಗಿ ಮತದಲ್ಲಿ ಸೇರಬೇಕೆಂದು, ಹಿರಿಯರ

ವಂಶವನ್ನು ಉಳಿಸಬೇಕೆಂದು ಮನಸ್ಸು ಕಾತರಿಸುತ್ತಿದೆ. ಪ್ರಾಯಶ್ಚಿತ್ತಕ್ಕೆ ಅಗ್ನಿಪ್ರವೇಶ ಮಾಡಿ ಬಾ ಎಂದು ಮತದವರು ವಿಧಿಸಿದರೆ, ಸಂತೋಷದಿಂದ ಅದನ್ನು ಕೈಗೊಳ್ಳುವೆನು.' ಮತ್ತೆ ತಾನು ಬ್ರಾಹ್ಮಣನಾಗುವಂತೆ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತಾನೆ.

ಖಾನ್ ಜಹಾನ್ ಮತ್ತೆ ಪೂರ್ವ ಧರ್ಮಕ್ಕೆ ಮತಾಂತರಗೊಳ್ಳಲು ನಿರ್ಧರಿಸಿದಾಗ ಅಯಷೆಯ ಮನಸ್ಸು ಅಲ್ಲೋಲ–ಕಲ್ಲೋಲಕ್ಕೆ ಒಳಗಾಗಿ ಗೊಂದಲದ ಬೀಡಾಗುತ್ತದೆ. ಅದನ್ನು ಪರಿಹರಿಸಲೆಂದೆ ಮೌಲಾನ ಮಾನವ ಧರ್ಮದ ಮಹತ್ವವನ್ನು ತಿಳಿಸುತ್ತಾನೆ. 'ಮಾನವ ಜಾತಿ ಎಂಬುದೊಂದೇ ಜಾತಿ. ದೇಶ ದೇಶಗಳಲ್ಲಿ ಜನ ಹಂಚಿಹೋಗಿಹರು. ಭಗವಂತ ಆಜ್ಞೆಯಿಂದೆಲ್ಲ ಜನತೆಯಲ್ಲಿ ಪ್ರವಾದಿಗಳು ಜನಿಸಿಹರು; ಅವರೆಲ್ಲ ಭಗವಂತನುಪದೇಶ ಸರಿಹರು; ಬೋಧೆಗಳ ಸಾರವೆಲ್ಲೆಡೆಯೊಂದೇ. ಭಗವಂತನೊಬ್ಬನೇ, ಬೋಧೆಯಲ್ಲರಿಗೊಂದೇ. ಅದನರಿತು ವಿಶ್ವಧರ್ಮವ ಬೆಳೆಸುವುದು ಮಾನವನ ಧರ್ಮ. ಮಲಮುಕ್ತರಾದವರು ವಿಶ್ವಾತ್ಮವೆಂಬುದನು ಕಾಣುವರು; ಆಚಾರ ಮುಕ್ತರಾದವರು ಮಾನವ ಜಾತಿಯೊಂದೆಂದು, ಮತ್ತೆ ಮಾನವ ಧರ್ಮವೊಂದೆಂದು ತಿಳಿಯುವರು'. ಹಾಗಾಗಿ ಮಾನವರೆಲ್ಲರೂ ಒಂದೇ ಜಾತಿ, ಒಂದೇ ಧರ್ಮ ಎಂದು ಬೋಧಿಸುತ್ತಾನೆ.

ಖಾನ್ ಜಹಾನ್ ಮತ್ತೆ ಪೂರ್ವ ಜನ್ಮಕ್ಕೆ ಹಿಂದಿರುಗುವ ಬಗ್ಗೆ ಪೂರ್ಣಯ್ಯನವರು ತ್ರಿಮತಸ್ಥ ಪಂಡಿತರ ಸಭೆ ಕರೆಯುತ್ತಾನೆ. ಕಾರಣಾಂತರಗಳಿಂದ ಮತ ಕೆಟ್ಟವರು ಮತ್ತೆ ಧರ್ಮದೊಳು ಸೇರುವ ಬಗ್ಗೆ ಧರ್ಮ ಸೂಕ್ಷ್ಮದ ಬಗ್ಗೆ ತಿಳಿಸಲು ಪಂಡಿತರನ್ನು ಕೋರುತ್ತಾನೆ. ಪಂಡಿತರ ಚರ್ಚೆಯಲ್ಲಿ ಒಮ್ಮೆ ಧರ್ಮ ಬಿಟ್ಟ ವ್ಯಕ್ತಿ ಮತ್ತೆ ಪೂರ್ವ ಧರ್ಮವನ್ನು ಸೇರಲು ಸಾಧ್ಯವಿಲ್ಲ ಎನ್ನುತ್ತಾರೆ. 'ಹಿಂದು ಧರ್ಮದೊಳಕ್ಕೆ ಬರಲಡ್ಡಿಯೇನಿಲ್ಲ; ಮತ್ತೆ ಮೊದಲಿನ ವರ್ಣ, ಸಂಪೂರ್ಣ ಬ್ರಾಹ್ಮಣ್ಯ ನಿನಗೆ ದೊರೆಯುವುದಿಲ್ಲ. ಜಾತಿಯಂ ಬಿಟ್ಟವರು ಮರದಿಂದ ಕಡಿವಡೆದ ಕೊಂಬೆಗಳು. ಅವುಗಳಂ ಸ್ವಸ್ಥಾನದಲಿ ಮತ್ತೆ ಹತ್ತಿಸುವ ಹಾಗಿಲ್ಲ. ಜನ ಬದುಕಬೇಕೆಂದು ಆತ್ಮಸಾಕ್ಷಿಗೆಯಳುಕಿ ಸದ್ಧರ್ಮಾಶಾಸ್ತ್ರಮಂ' ಎಂದು ಖಡಾಖಂಡಿತವಾಗಿ ನುಡಿಯುತ್ತಾರೆ. ಪಂಡಿತರು ಖಾನನನ್ನು ಬ್ರಾಹ್ಮಣ್ಯದೊಳಗೆ ಸೇರಿಸಲು ಇಷ್ಟಪಟ್ಟರೂ, ಪೂರ್ತಿ ಹಕ್ಕುಗಳನ್ನು ಕೊಡಲೊಪ್ಪದೆ ಸ್ವಲ್ಪ ಕೀಳೆಂಬ ಕಳಂಕವಿಡುವ ಪ್ರಯತ್ನ ಮಾಡುತ್ತಾರೆ.

'ಬ್ರಹ್ಮವಂ ತಿಳಿದವನು ಬ್ರಾಹ್ಮಣನು; ಎಲ್ಲ ಮತದಲಿ ಎಲ್ಲ ಜಾತಿ ಕುಲಗಳ ಎಲ್ಲೆಕಟ್ಟುಗಳಿಲ್ಲ. ಹುಟ್ಟಿಂದ ಎನದೇನು ಇಸ್ಲಾಮ ಮತವಲ್ಲ. ತಂದೆ ತಾತಂದಿರೂ ಮುತ್ತಾತರೆಲ್ಲರೂ ತಲೆ ತಲೆತಲಾಂತರದಿಂದ ಜನ್ಮದಲಿ ಶುದ್ಧ ವರ್ಣಿಗಳಗ್ರವರ್ಣಿಗಳು. ಗೋತ್ರ ಸೂತ್ರವ ಹಿಡಿದು, ವೈದಿಕ ಶ್ರದ್ಧೆಯಿಂದ ನಡೆಯುತ್ತ ಬಂದವರು. ಐದು ವರ್ಷಗಳಿಂದ ಈಗೆಂತೋ ಜಾತಿಯಂ ಕೆಟ್ಟಿಹೆನು; ಬಲವಂತದಿಂದಾಯ್ತು, ನಾನಾಗಿ ಕೆಡಲಿಲ್ಲ. ಬೇರಾವ ಆಸೆಆಮಿಷಗಳಿಗೆ ನಾ ಮರುಳುಗೊಳಲಿಲ್ಲ. ಈ ಆತ್ಮ, ಈ ಜೀವ, ಧರ್ಮಕ್ಕೆ ಕಾತರಿಸಿ ಶರಣಾಗಿ ಬಂದಿಹುದು; ಕೃಪೆಮಾಡಿ ಕೂಡಿಕೊಳ್ಳಿರಿಯೆನ್ನ' ಎಂದು ಪರಿಪರಿಯಾಗಿ ಪ್ರಾರ್ಥಿಸಿದರೂ ಪಂಡಿತರ ಮನಸ್ಸು ಬದಲಾಗುವುದಿಲ್ಲ. ಗೋ ಬ್ರಾಹ್ಮಣರ ಸೇವೆಯಂ ಮಾಡುತ್ತ, ದೈವಭಕ್ತಿಯ ತಳೆದು, ಭಾಗವತ ಪುಣ್ಯಕಥೆ ಭಜನೆಗಳ ಕೇಳುತ್ತ ಬಾಳಿದರೆ ಸದ್ಗತಿ ದೊರೆಯುತ್ತದೆ ಎಂದು ಸಲಹೆ ನೀಡುತ್ತಾರೆ. ಖಾನನು ಇದನ್ನು ಒಪ್ಪಿಕೊಳ್ಳುವುದಿಲ್ಲ.

ಸನಾತನ ಧರ್ಮ ಎಲ್ಲರನ್ನು ಸ್ವೀಕರಿಸುತ್ತದೆ ಎಂದು ನಂಬಿದ್ದ ಖಾನ್ ಪಂಡಿತರ ಮಾತಿನಿಂದ ಕುಪಿತಗೊಳ್ಳುತ್ತಾನೆ. 'ಇಸ್ಲಾಮ ಧರ್ಮದಲಿ ಪೂರ್ವಜಾತಿಯ ಲೆಕ್ಕಿಸದೆ ಬಂದವರ ಕೂಡಿಕೊಳ್ಳುವರು; ಆಳು ಅರಸರನೆಲ್ಲ ಸಮವೆಂದು ಕಾಣುವರು ಇಸ್ಲಾಮ ಧರ್ಮದಲಿ; ಏನೊಂದು ಭೇದಭಾವಗಳಿಲ್ಲ, ವರ್ಣಪಂಗಡವಿಲ್ಲ ಇಸ್ಲಾಮ ಧರ್ಮದಲಿ; ಎಲ್ಲರಂ ಸಮನಾಗಿ ಒಂದಾಗಿ ವಿಶ್ವಸಂಸಾರದೊಳ್ ಸೇರಿದಂತೆ ಶಾಂತಿಯಂ

ಬೆಳೆಸುವರು ಇಸ್ಲಾಮ ಧರ್ಮದಲಿ. ಎಲ್ಲ ಮತಗಳು ಎಲ್ಲ ಧರ್ಮಗಳು ದೇವನಿಂ ಬಂದಿಹವು, ಅಚಲ ಸನಾತನಂ ಪವಿತ್ರಂ' ಎನ್ನುತ್ತಾನೆ. ಖಾನ್ ಇಸ್ಲಾಂ ಧರ್ಮವನ್ನು ಹೊಗಳುವುದು ಆ ಧರ್ಮದ ಮೇಲಿನ ಅಚಲ ಭಕ್ತಿ, ಮಮಕಾರದಿಂದಲ್ಲ. ಜಗತ್ತಿನ ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠ ಧರ್ಮ ಹಿಂದು ಧರ್ಮ. ಅದರ ನೆರಳಲ್ಲಿ ಬದುಕುತ್ತಿರುವ ಜನರು ಮಾಯೆ, ಭ್ರಮೆಯ ಲೋಕದಿಂದ ಹೊರಬರಬೇಕೆಂದು ಮನವರಿಕೆ ಮಾಡಿ ಕೋಪದಿಂದ ಹೊರಬರುತ್ತಾನೆ.

ಇತ್ತ ಲಲಿತೆ ಮತ್ತೆ ಗಂಡನನ್ನು ಪಡೆದ ಸಂತೋಷವನ್ನು ಅನುಭವಿಸದ ಸ್ಥಿತಿಯಲ್ಲಿ ಒದ್ದಾಡುತ್ತಿರುತ್ತಾಳೆ. ಮದುವೆಯೆನ್ನುವುದು ಪೂಜ್ಯತಮ ಸಂಸ್ಕಾರ. ಗೃಹಸ್ಥ ಧರ್ಮ ಸಾಧನೆಗೆ ಪತಿಗೆ ಬೆಂಬಲಳಾಗಿ ನಿಂತು ಧರ್ಮಸತಿಯೆನಿಸಿಕೊಳ್ಳಬೇಕೆಂಬ ಅಸೆ ಇದ್ದರೂ, ಜಾತಿಭ್ರಷ್ಟಳಾಗಲು ಇಷ್ಟ ಪಡುವುದಿಲ್ಲ. ಜಾತಿಯೊಳಗಿದ್ದಲ್ಲಿ ಪತಿಯೇ ಪರದೈವ, ಜಾತಿಯಂ ಬಿಟ್ಟಲ್ಲಿ ದೈವವೇ ಪತಿ ಎಂದುಕೊಂಡು ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ಹಾರಿ ಪ್ರಾಣ ಕಳೆದುಕೊಳ್ಳುವ ನಿರ್ಧಾರಕ್ಕೆ ಬರುತ್ತಾಳೆ. ತೀರದಲ್ಲಿದ್ದ ತರ್ಕ ಪಂಡಿತ ಮತ್ತು ಇತರರು ನದಿಗೆ ಹಾರಿ ಕೊಚ್ಚಿ ಹೋಗುತ್ತಿರುವ ಹೆಣ್ಣನ್ನು ಕಂಡು ಯಾರಾದರೂ ಕಾಪಾಡುವರೇ ಎಂದು ನೋಡುತ್ತಿರುವಾಗ, ಪಂಡಿತರ ಚರ್ಚೆ, ನಿರ್ಧಾರಕ್ಕೆ ಬೇಸತ್ತು ನೋಡ ಮನಸ್ಸಿನಿಂದ ಬರುತ್ತಿದ್ದ ಖಾನ್ ನದಿಗೆ ಧುಮುಕಿ ಲಲಿತೆಯನ್ನು ಎತ್ತಿಕೊಂಡು ಬರುತ್ತಾನೆ. ಅವನು ಕಾಪಾಡುವಷ್ಟರಲ್ಲಿ ಲಲಿತೆಯ ಜೀವ ಹೋಗಿರುತ್ತದೆ.

ಅಯಷೆ ಖಾನ್ ಮತ್ತೆ ಪೂರ್ವ ಧರ್ಮವನ್ನು ಸೇರಲು ಮನಸ್ಸು ಮಾಡಿದ್ದಾನೆ ಎಂಬುದನ್ನು ತಿಳಿದು ಚಿಂತಾಕ್ರಾಂತಳಾಗಿ ಮನೋರೋಗಕ್ಕೆ ತುತ್ತಾಗಿ ಪ್ರಾಣ ಬಿಡುತ್ತಾಳೆ. ಇಬ್ಬರು ಪ್ರೀತಿ ಪಾತ್ರರನ್ನು ಕಳೆದುಕೊಂಡ ಖಾನ್ ಹುಚ್ಚನಾಗುತ್ತಾನೆ. ಈ ದುರಂತದ ವಿಷಯ ತಿಳಿದ ಮುಸಲ್ಮಾನ ಹಾಗೂ ಹಿಂದೂ ಪಂಡಿತರು ಮೌಲಾನನ ಮನೆಗೆ ಬರುತ್ತಾರೆ. ಎಲ್ಲರೂ ರಾಮರಾಯನ ದುರಂತ ಬದುಕಿಗೆ ಮಮ್ಮಲ ಮರುಗುತ್ತಾರೆ. ಖಾನ್ ಮೃತ್ಯುದೇವತೆಯನ್ನು ಪ್ರಾರ್ಥಿಸುತ್ತಾ ತನ್ನನ್ನು ಅಪ್ಪಿಕೊಳ್ಳಿರೆಂದು ಬೇಡಿಕೆಯನ್ನು ಮುಂದಿಡುತ್ತಾನೆ. 'ಎನ್ನೀಗ ಸ್ವರ್ಗವೋ ನರಕವೋ ನೀವೆಲ್ಲಿಗೋಯ್ದೊಡಂ ನಾನಿರುವ ಎಡೆಯಲ್ಲಿ ಈಯೆನ್ನ ಮಡದಿಯರು ಇರುವಂತೆ ಕರುಣಿಸಿರಿ; ನಿಮ್ಮ ಬೇಡುವುದಿನಿತೆ, ಹೆಚ್ಚು ಬೇಡುವುದಿಲ್ಲ' ಎಂದು ಅಂತ್ಯಕಾಲದ ವರವನ್ನು ಬೇಡುತ್ತಾ, ಲಲಿತೆ ಅಯಷೆಯರ ಮೇಲೆ ತೋಳುಗಳನ್ನು ನೀಡಿ, ಕುಗ್ಗಿ ಸಾಯುತ್ತಾನೆ.

ತರ್ಕ ಪಂಡಿತ ಕಣ್ಣೀರು ಹಾಕುತ್ತಾ ಮುಂದಕ್ಕೆ ನುಗ್ಗಿ, ಮೂವರಿಗೂ ಕುಂಕುಮ ಹಚ್ಚುವನು. ಖಾನ್ ಜಹಾನ್ ನಿಗೆ ಜನಿವಾರ ಹಾಕಿ, ಮೂವರಿಗೂ ಪಂಚಗವ್ಯ ಒಂದೊಂದು ಉದ್ಧರಣೆ ಬಾಯಿಗೆ ಹಾಕಿ, "ಮೂವರೂ ವೈಕುಂಠ ಸೇರುವಿರಿ. ವಿಷ್ಣು ರೂಪದಲಿ ನೀನಲ್ಲಿರುವೆ; ಸಿರಿದೇವಿ ಭೂದೇವಿ ರೂಪದಲಿ ಈ ನಿನ್ನ ಮಡದಿಯರು ನಿನ್ನನೋಲೈಸುವರು, ಮಿಗಿಲಾಗಿ ಶೋಭಿಪರು' ಎಂದು ಆಶೀರ್ವಾದ ಮಾಡುತ್ತಾನೆ. ಈ ನಾಟಕ ದುರಂತವಾಗಿ ಕೊನೆಗೊಳ್ಳುತ್ತದೆ. ಅದಕ್ಕಾಗಿಯೇ ನಾಟಕಕಾರರು ತಮ್ಮ ನಾಟಕಕ್ಕೆ 'ಧರ್ಮ ದುರಂತ' ಎಂಬ ಹೆಸರನ್ನು ಇಟ್ಟಿರಬಹುದೇನೋ ಎನಿಸುತ್ತದೆ.

ಡಿ.ಎ.ಶಂಕರ್ ಅವರ ಪ್ರಸಿದ್ಧ ನಾಟಕ 'ಟಿಪ್ಪುಸುಲ್ತಾನ್'. ಈ ನಾಟಕದ ಎರಡನೆಯ ದೃಶ್ಯದಲ್ಲಿ ನಾಟಕಕಾರರು ಧರ್ಮ ಸೂಕ್ಷ್ಮದ ಪ್ರಶ್ನೆಯನ್ನು ವಿಶ್ಲೇಷಿಸಿದ್ದಾರೆ. ಧರ್ಮವೇ ದೇವರು ಎಂದು ನಂಬಿರುವ ಮನುಷ್ಯನಿಗೆ ಪ್ರಾಣ ಅಥವಾ ಜಾತಿಯಲ್ಲಿ ಯಾವುದಾದರೂ ಒಂದನ್ನು ಉಳಿಸಿಕೊಳ್ಳುವ ಪ್ರಸಂಗ ಬಂದಾಗ ಅನುಭವಿಸುವ ಯಾತನೆಯನ್ನು ಈ ನಾಟಕದಲ್ಲಿ ವಿಶ್ಲೇಷಣೆಗೆ ಒಳಗು ಮಾಡಿದ್ದಾರೆ. ಗೋವಿಂದಭಟ್ಟನೆಂಬ ಬ್ರಾಹ್ಮಣ, ಬ್ರಾಹ್ಮಣ್ಯವನ್ನು ತೊರೆದು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ಖಾನ್ ಜಹಾನ್ ಖಾನ್ ಆಗಿರುತ್ತಾನೆ. ತನ್ನ ಪಿತೃಪಿತಾಮಹರ ಸಂಕಟ, ಶಾಪ

ಎಲ್ಲಿ ತನ್ನ ಮಕ್ಕಳು ಮರಿಯನ್ನು ತಟ್ಟುತ್ತವೆಯೋ ಎಂಬ ಭಯದಿಂದ ಮತ್ತೆ ಬ್ರಾಹ್ಮಣ ಜಾತಿಗೆ ಮರಳಲು ಮನಸ್ಸು ಮಾಡುತ್ತಾನೆ. ಹಿರಿಯ ಬ್ರಾಹ್ಮಣರೊಬ್ಬರು ಅವನನ್ನು ಮತ್ತೆ ಪೂರ್ವ ಜಾತಿಗೆ ತರಲು ಯತ್ನಿಸುತ್ತಾರೆ. ಆದರೆ ಅದರಲ್ಲಿಯೂ ಧಾರ್ಮಿಕ ತೊಡಕುಗಳು ಎದುರಾಗುತ್ತವೆ.

ಮತ್ತೆ ತಾನು ಬ್ರಾಹ್ಮಣನಾದರೆ ತನಗೆ ಹಿಂದೂ ಸಮಾಜದಲ್ಲಿ ಬ್ರಾಹ್ಮಣ್ಯದ ಸ್ಥಾನಮಾನಗಳು ದೊರೆಯುತ್ತವೆಯೇ? ಎಂದು ಪ್ರಶ್ನಿಸುತ್ತಾನೆ. ಆದರೆ ಹಿರಿಯರು ಕೆಲವೊಂದು ಹಕ್ಕುಗಳನ್ನು ಕಳೆದುಕೊಳ್ಳುತ್ತಿಯ ಎಂದು ಹೇಳಿದಾಗ ಚಿಂತಾಕ್ರಾಂತನಾಗುತ್ತಾನೆ. 'ನೀವು ನನ್ನನ್ನು ಅರೆ ಬ್ರಾಹ್ಮಣನನ್ನು ಮಾಡಿ, ಮತ್ತೆ ನಿಮ್ಮ ಒಳ ಪಂಗಡದಿಂದ ಆಚೆ ಇಟ್ಟು, ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಮಾಡಿ ನನ್ನನ್ನು ನನ್ನ ಕುಟುಂಬವನ್ನು ನಿರಂತರವಾದ ಅವಮಾನಕ್ಕೆ ಗುರಿಮಾಡಿ, ನಿಧನಿಧಾನವಾಗಿ ಸಾಯಿಸಿ ಬಿಡುತ್ತೀರಿ. ಇಸ್ಲಾಮಿನಲ್ಲಿ ಯಾವ ನಿರ್ಬಂಧವೂ ಇಲ್ಲ. ಯಾವ ಶರತ್ತೂ ಇಲ್ಲ. ನಮ್ಮ ಮಕ್ಕಳನ್ನು ಕುಲೀನರು ಮದುವೆಯಾಗುತ್ತಾರೆ. ನನ್ನನ್ನು ಯಾರೂ ಮಸೀದಿಯೊಳಗೆ ಹೋಗದಂತೆ ತಡೆಯುವುದಿಲ್ಲ. ನನ್ನ ಜೊತೆ ಸಹಭೋಜನ ಮಾಡುತ್ತಾರೆ. ಅದಕ್ಕಿಂತ ಮುಖ್ಯವಾಗಿ ನನ್ನ ಸಾವಿನಲ್ಲಿ ಎಲ್ಲ ನನ್ನ ಜೊತೆ ಇರುತ್ತಾರೆ. ನನ್ನ ಶವಕ್ಕೆ ಯಾವ ಅಪಮಾನವೂ ತಾಗದಂತೆ ಸಂಸ್ಕಾರ ನಡೆಯುತ್ತದೆ. ಅಂಥದ್ದರಲ್ಲಿ ನಿಮ್ಮ ಪ್ರಾಯಶ್ಚಿತ್ತ ವಿಧಿಯೆಲ್ಲವನ್ನೂ ಒಪ್ಪಿಯೂ ಕೂಡ ನಿಮ್ಮ ಧರ್ಮದ ಹೊಸ್ತಿಲ ಹೊರಗೇ ನಿಂತು, ಅನ್ಯನಾಗುವುದು ನನಗೆ ಬೇಕಿಲ್ಲ. ನಾನು ಇಸ್ಲಾಮಿಗೆ ಬಂದಿದ್ದೇನೆ. ನನ್ನ ಮಕ್ಕಳು ಇಸ್ಲಾಮಿ ಧರ್ಮ ಒಪ್ಪಿದ್ದಾರೆ. ನಾನಿಲ್ಲೇ ಇರುತ್ತೇನೆ. ನಿಮಗೆ, ನಿಮ್ಮ ಧರ್ಮಕ್ಕೆ ನಮಸ್ಕಾರ, ಬರುತ್ತೇನೆ' ಎಂದು ಹೇಳಿ ಹೊರಬರುತ್ತಾನೆ. ಅಲ್ಲಿಗೆ ಪುನರ್ ಮತಾಂತರದ ಪ್ರಯತ್ನ ಕುಸಿದುಬೀಳುತ್ತದೆ. ಇವನ ಮಾತನ್ನು ಕೇಳಿ ಮತ್ತೆ ಅವನನ್ನು ಹಿಂದೂ ಧರ್ಮಕ್ಕೆ ತರಲು ಪ್ರಯತ್ನಿಸುತ್ತಿದ್ದ ವೃದ್ಧರ ಬಾಯಿ ಕಟ್ಟುತ್ತದೆ. ಗೋವಿಂದಭಟ್ಟ ಖಾನ್ ಜಹಾನ್ ಖಾನ್ ಆಗಿಯೇ ಉಳಿಯಲು ನಿರ್ಧರಿಸುತ್ತಾನೆ. ನಾಟಕಕಾರರು ಇಲ್ಲಿ ಯಾವ ಧರ್ಮವನ್ನು ಅಳಿಯದೆ, ವಸ್ತು ಸ್ಥಿತಿಯ ಪರಿಚಯ ಮಾಡಿದ್ದಾರೆ. ಮೈಸೂರು ಹಲವು ಧರ್ಮೀಯರಿಗೆ ಆಶ್ರಯ ನೀಡಿದೆ. ವಿವಿಧ ಧರ್ಮ-ಸಂಸ್ಕೃತಿಗಳ ಸಂಗಮವಾಗಿ ಬೆಳೆದು ಬಂದಿರುವ ಹಿಂದೂ ಧರ್ಮದ ಆಸರೆಯಲ್ಲೇ ರೂಪುಗೊಂಡಿರುವ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪಂಥಗಳ ವೈಧಿಕ ಧರ್ಮ; ಶೈವ, ಲಕುಲೀಶ, ಪಾಶುಪತ ಮುಂತಾದ ಪಂಥಗಳನ್ನು ಖಂಡಿಸಿ ರೂಪುಗೊಂಡ ವೀರಶೈವ ಧರ್ಮ; ಅಹಿಂಸೆಯನ್ನೇ ಪರಮ ಧ್ಯೇಯವಾಗಿಟ್ಟುಕೊಂಡ ಜೈನಧರ್ಮ; ಹೊರದೇಶಗಳಿಂದ ಪ್ರವೇಶಿಸಿ ಇಲ್ಲಿಯೇ ಬೇರುಬಿಟ್ಟುರುವ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಹಾಗೂ ಜನರ ಬದುಕಿನಲ್ಲಿ ಒಂದಾಗಿ ಅವರಿಂದಲೇ ಬೆಳೆದು ಬಂದ ಗ್ರಾಮೀಣ ದೇವತೆಗಳ ಆರಾಧನೆಯೇ ಪ್ರಧಾನವಾಗಿರುವ ಜನಪದ ಧರ್ಮ – ಇವುಗಳನ್ನು ಇಲ್ಲಿ ಪ್ರಧಾನವಾಗಿ ಕಾಣಬಹುದಾಗಿದೆ. ಕೆಲವು ಕಡೆಗಳಲ್ಲಿ ಒಂದೇ ಧರ್ಮವನ್ನು ಆಚರಿಸುವ ಜನ ನೆಲೆ ನಿಂತಿರುತ್ತಾರಾದರೂ, ಬಹುಪಾಲು ಊರುಗಳಲ್ಲಿ ವಿವಿಧ ಧರ್ಮದ ಜನ ಒಂದೆಡೆ ಕಲೆತಿರುತ್ತಾರೆ. ಈ ಸೌಹಾರ್ದತೆಯಿಂದಲೇ ವಿವಿಧತೆಯಲ್ಲಿ ಏಕತೆಯನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. ಮೈಸೂರು ಒಡೆಯರು ವಿವಿಧ ಧರ್ಮಗಳ ಜನ ಒಂದೆಡೆ ಕಲೆತು ತಮ್ಮ ಸಾಮ್ರಾಜ್ಯವನ್ನು ಸಹಬಾಳ್ವೆಯ ಕೇಂದ್ರವನ್ನಾಗಿ ಮಾಡಲು ಮಾದರಿಯಾಗಿದ್ದರೆಂಬುದು ಗಮನಾರ್ಹ ಸಂಗತಿಯಾಗಿದೆ.

ಒಟ್ಟಾರೆ ದುಡಿಮೆಯ ಚಲನಶೀಲತೆಯನ್ನು ಮೈಗೂಡಿಸಿಕೊಂಡು ಆ ಮೂಲಕ ಧರ್ಮಗಳನ್ನು ಹುಟ್ಟು ಹಾಕಿತು. ಇವುಗಳೇ ಆದಿಮ ಜನಪದ ಧರ್ಮಗಳೆಂದು ಅರಿಯಬಹುದು. ಏಕೆಂದರೆ ಇವು ಅಭಿಜಾತ ಧರ್ಮಗಳ ಪರಿಕಲ್ಪನೆಗೆ ವಿರುದ್ಧವಾಗಿರುತ್ತವೆ. ಸ್ಥಿರತೆ ಮತ್ತು ಸನಾತನತೆ ಎಂಬುದು ಅಭಿಜಾತ ಧರ್ಮಗಳ ಮುಖ್ಯ

ಗುಣಲಕ್ಷಣಗಳಾದರೆ, ಬದಲಾವಣೆ ಮತ್ತು ನಿಸರ್ಗದೊಳಗಿರುವ ಸಂಬಂಧ ಜನಪದ ಧರ್ಮಗಳ ಮುಖ್ಯ ಲಕ್ಷಣಗಳಾಗಿವೆ. ಜನಪದರು ತಾವು ಪವಿತ್ರವೆಂದು ನಂಬಿರುವ ಕಾಡು, ಮರ, ಬಳ್ಳಿ ಪ್ರಾಣಿಗಳ ಬಗ್ಗೆ ಅವರಿಗೆ ಭಯ, ಭಕ್ತಿ, ಗೌರವಭಾವನೆಗಳಿದ್ದು, ಅವುಗಳ ವಂಶ ವೃದ್ಧಿಯಾಗುವಂತೆ ನೋಡಿಕೊಳ್ಳುವುದು ಅವರು ಅನುಸರಿಸುವ ಧರ್ಮದ ತಾತ್ವಿಕತೆಯಾಗಿದೆ. ಹೀಗೆ ಉಳಿಕೆ ಮತ್ತು ಪುನರುಜ್ಜೀವನ ಈ ಎರಡು ಸಂಗತಿಗಳು ಧರ್ಮವನ್ನು ರೂಪಿಸುತ್ತಾ, ಬೆಳಸುತ್ತಾ ಬಂದಿವೆ. ಆರ್ಥಿಕ ಮತ್ತು ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಈ ಎರಡು ಸಂಗತಿಗಳು ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಬುಡಕಟ್ಟು ಅಥವಾ ಆದಿಮಾನವನ ಮನೋವ್ಯಾಪಾರವನ್ನು ವಿವರಿಸಲು ಸಹಾಯಕವಾಗಿವೆ. ಉಳಿಕೆಯ ಸಿದ್ಧಾಂತ ಮತ್ತು ಪುನರುಜ್ಜೀವನ ಕಾರ್ಯ ಮಾನವನ ವಿಕಾಸ ಪಥದಲ್ಲಿ ಸಂಸ್ಕೃತಿ ಧರ್ಮವನ್ನು ರೂಪಿಸಲು ಪ್ರಧಾನ ಪಾತ್ರವಹಿಸಿವೆ. ಇವು ಇಂದಿಗೂ ಮೈಸೂರು ಸಂಸ್ಥಾನಕ್ಕೆ ಒಳಪಟ್ಟ ಎಲ್ಲಾ ಪ್ರದೇಶದಲ್ಲಿಯೂ ಕಂಡುಬರುತ್ತವೆ. 'ವಸುದೈವಕುಟುಂಬಕಂ' ಎಂಬ ವಿಶ್ವ ಭ್ರಾತೃತ್ವದ ಸಂಕೇತವಾಗಿ ಮೈಸೂರು ಅರಸರು ಸರ್ವಧರ್ಮ ಸಮನ್ವಯತೆಯನ್ನು ಸಾರಿದ್ದು ಆ ಎಲ್ಲಾ ಅಂಶಗಳು ಮೇಲೆ ತಿಳಿಸಿದ ನಾಟಕಗಳಲ್ಲಿ ಚಿತ್ರಿತಗೊಂಡಿವೆ. ಇವುಗಳು ಮೈಸೂರು ಸಂಸ್ಥಾನದ ಧಾರ್ಮಿಕ ಪರಂಪರೆಯ ನೆಲೆಯನ್ನು ಅರಿಯಲು ಸಹಾಯಕವಾಗಿವೆ.

**ಪರಾಮರ್ಶನ ಗ್ರಂಥಗಳು**


- ಅಡ್ಡಂಡ ಸಿ. ಕಾರ್ಯಪ್ಪ. (2022). *ಟಿಪ್ಪು ನಿಜಕನಸುಗಳು.* ಅಯೋಧ್ಯಾ ಪಬ್ಲಿಕೇಷನ್ಸ್,
- ಶ್ರೀನಿವಾಸ, (2000). *ಕಾಕನಕೋಟೆ.* ಕಾರ್ಯಾಲಯ ಟ್ರಸ್ಟ್,
- ಶ್ರೀನಿವಾಸಮೂರ್ತಿ, ಎಂ.ಆರ್. (1979). *ಧರ್ಮ ದುರಂತ.* ಗೀತಾ ಬುಕ್ ಹೌಸ್.
- ಶಂಕರ್, ಡಿ.ಎ. *ಮೈಸೂರು ಇತಿಹಾಸ ನಾಲ್ಕು ಐತಿಹಾಸಿಕ ನಾಟಕ ಚಕ್ರ, ಟಿಪ್ಪುಸುಲ್ತಾನ್ ನಾಟಕ.* ಶ್ರೀ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್.